೨) ಭಾರತ ದಂಡ ಸಂಹಿತೆಯಲ್ಲಿ ೩೦೪(ಬಿ) ಎಂಬ ಹೊಸ ಕಲಂ ಅನ್ನು ವರದಕ್ಷಿಣೆ ಮರಣವೆಂದು ನಿರೂಪಿಸಿ ಸೇರಿಸಲಾಗಿದೆ.

೩) ಪೋಲೀಸ್ ಇಲಾಖೆಯವರು ಈ ಪ್ರಕರಣಗಳಿಗೆ ಹೆಚ್ಚಿ ಅದ್ಯತೆ ಮತ್ತು ದಕ್ಷತೆಯಿಂದ ಗಮನ ಕೊಡುವಂತೆ ಮಾಡಲು ಈ ಅಪರಾಧಗಳನ್ನು ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಗಳು ತಪಾಸಿಸಬೇಕೆಂದು ಸರ್ವೇ ಸಾಮಾನ್ಯವಾಗಿ ಇಂತಹ ಪ್ರಕರಣಗಳನ್ನು ಆದಷ್ಟು ಬೇಗ ಪತ್ತೆ ಹಿಡಿದು ತನಿಖೆಗೆ ಒಳಪಡಿಸಬೇಕೆಂದೂ ಸರ್ಕಾರವು ಕ್ರಮ ತೆಗೆದುಕೊಂಡಿದೆ.

೪) ಇಂತಹ ಪ್ರಕರಣಗಳಲ್ಲಿ ವೈದ್ಯಕೀಯ ಮರಣೋತ್ತರ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡುವುದಲ್ಲದೇ ಅಂತಹ ಪರೀಕ್ಷೆ ಇಬ್ಬರು ವೈದ್ಯರಿಂದ ಆಗಬೇಕೆಂದೂ ನಿಯಮಿಸಲಾಗಿದೆ.

೫) ಪ್ರಸಾರ ಮಾಧ್ಯಮಗಳ ಮುಖಾಂತರ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಕ್ರಮ ತೆಗೆದುಕೊಳ್ಳಲಾಗಿದೆ.

ಸಚಿವಾಲಯದಲ್ಲಿ ಒಂದೇ ಕಡೆ ಮೂರು ವರ್ಷಗಳಿಗೂ ಹೆಚ್ಚು ವರ್ಷ ಸೇವೆ ಯಲ್ಲಿರುವ ಅಧಿಕಾರಿಗಳ ಬಗ್ಗೆ

೪೨೩(೫೫೨) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗಾಂಡ್ಲು ಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಒಂದೇ ಕಡೆ ಎರಡು, ಮೂರು ವರ್ಷಗಳಿಗೂ ಹೆಚ್ಚು ವರ್ಷ ಸೇವೆ ಸಲ್ಲಿಸುತ್ತಿರುವ ಶಾಖಾಧಿಕಾರಿಗಳು, ಅಧೀನ ಕಾರ್ಯದರ್ಶಿಗಳು ಹಾಗೂ ಉಪ ಕಾರ್ಯದರ್ಶಿಗಳೆಷ್ಟು ?

ಆ) ಕಳೆದ ಸಾರಿ ಎರಡು ವರ್ಷಗಳಿಗೂ ಹೆಚ್ಚು ವರ್ಷ ಒಂದೇ ಕಡೆ ಸೇವೆ ಸಲ್ಲಿಸುತ್ತಿರುವವರನ್ನು ಬದಲಾಯಿಸಿ ಬೇರೆ ಶಾಖೆಗೆ ವರ್ಗಾಯಿಸುವುದಕ್ಕೆ ಸರ್ಕಾರದವರು ಆದೇಶ ನೀಡಿದ್ದರೂ ಸಹ ಅದನ್ನು ಸಚಿವಾಲಯದಲ್ಲಿ ಪೂರ್ಣ ಪಾಲಿಸದೇ ಇರಲು ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಶಾಖಾಧಿಕಾರಿಗಳು — ೬೭
ಅಧೀನ ಕಾರ್ಯದರ್ಶಿಗಳು — ೧೮
ಉಪ ಕಾರ್ಯದರ್ಶಿಗಳು — ೦೭

ಆ) ವರ್ಗಾವಣೆಗಳನ್ನು ಮಾಡಲಾಗಿತ್ತು. ಆದರೆ ಕೆಲವು ಅಧಿಕಾರಿಗಳ ಆಡಳಿತ ಅನುಭವದ ಆವಶ್ಯಕತೆಯಿಂದಲೂ ಮತ್ತು ಕೆಲವು ಇಲಾಖೆಗಳಲ್ಲಿ ವಿಶಿಷ್ಟ ಪರಿಣತಿ ಹೊಂದಿದ ಅಧಿಕಾರಿಗಳನ್ನು ಅವರ ಸ್ಥಾನಕ್ಕೆ ಬೇರೊಬ್ಬರು ಬರುವವರೆಗೆ, ಉಳಿಸಿಕೊಳ್ಳಲಾಯಿತು.

ದೇವನಹಳ್ಳಿ ಮತ್ತು ವಿಜಯಪುರ ಪೋಲೀಸ್ ಠಾಣೆಗಳಲ್ಲಿರುವ ಪೋಲೀಸ್ ಕಾನ್ಸ್‌ಟೇಬಲ್‌ಗಳ ಬಗ್ಗೆ

೪೨೭(೫೨೪) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದೇವನಹಳ್ಳಿ ಮತ್ತು ವಿಜಯಪುರ ಪೋಲೀಸ್ ಠಾಣೆಗಳಲ್ಲಿನ ಒಟ್ಟು ಪೋಲೀಸ್ ಕಾನ್ಸ್‌ಟೇಬಲ್‌ಗಳ ಬಲ?

ಆ) ದೇವನಹಳ್ಳಿ ಮತ್ತು ವಿಜಯಪುರದ ಜನ ಸಂಖ್ಯೆ?